22864990, 22867358

ಕರ್ನಾಟಕ ಸರ್ಕಾರ e-mail:dpl_dir_acts@yahoo.co.in

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಸಂ. ಸಾಗ್ರಂಇ/ನಿಕ/ಪುಖವಿ/ಪು.ಖ.ಮಿ.ಹೆ/19/2020-21 4486

ನಿರ್ದೇಶಕರ ಕಛೇರಿ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
4ನೇ ಮಹಡಿ,ಡಾ: ಅಂಬೇಡ್ಕರ್ ವೀದಿ,
ಬೆಂಗಳೂರು-560 001.

ದಿನಾಂಕ: 04-12-2020

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಶಿಕ್ಷಣ ಇಲಾಖೆ, ಬಹು ಮಹಡಿಗಳ ಕಟ್ಟಡ,
ಬೆಂಗಳೂರು 560 001.

ಮಾನ್ಯರೆ,

ವಿಷಯ: ಪುಸ್ತಕ ಖರೀದಿ ಮಿತಿಯನ್ನು ರೂ. 1.00 ಲಕ್ಷದಿಂದ 3.00 ಲಕ್ಷಕ್ಕೆ ಹಾಗೂ ಕನ್ನಡ ಪುಸ್ತಕಗಳ ಸಗಟು ಖರೀದಿಯನ್ನು 300 ರಿಂದ 500 ಪ್ರತಿಗಳಿಗೆ ಹೆಚ್ಚಿಸುವ ಕುರಿತು-

ಉಲ್ಲೇಖಃ
1) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿ 09-09-2020 ರಂದು ನಡೆದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ-
2) ಸರ್ಕಾರದ ಆದೇಶ ಸಂ: ಇಡಿ 1 ಎಲ್‌ಬಿಪಿ 2004, ಬೆಂಗಳೂರು ದಿನಾಂಕ: 07-02-2005.
3) ಅಧ್ಯಕ್ಷರು, ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ (ರಿ) ಇವರ ಮನವಿ ಪತ್ರ ದಿನಾಂಕ 25-11-2020.

---------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಲ್ಲಿ ಉತ್ತಮ ಮೌಲ್ಯದ ಗ್ರಂಥಗಳನ್ನು ಸಂಗ್ರಹಿಸಿಡುವ ಹಾಗೂ ಸಾರ್ವಜನಿಕ ಓದುಗರ ಅಭಿರುಚಿಗೆ ಅನುಸಾರವಾಗಿ ಗ್ರಂಥಗಳನ್ನು ಒದಗಿಸುವ ದೃಷ್ಟಿಯಿಂದ ಉಲ್ಲೇಖ-2 ರ ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸುವ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದ ಪರಿಷ್ಕರಿಸಿದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ (ಪ್ರತಿ ಲಗತ್ತಿಸಿದೆ).

ಅದರಂತೆ, ಸರ್ಕಾರದ ಆದೇಶ ಸಂಖ್ಯೆ ಇಡಿ 68 ಎಲ್‌ಐಬಿ 2005, ಬೆಂಗಳೂರು ದಿನಾಂಕ 02ನೇ ಸೆಪ್ಟೆಂಬರ್ 2006 ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಯಾವುದೇ ಸಂಸ್ಥೆ / ಲೇಖಕ-ಪ್ರಕಾಶಕ / ಪ್ರಕಾಶಕರಿಂದ ರೂ. 1.00 ಲಕ್ಷ ಮಿತಿಗೊಳಪಟ್ಟು ಖರೀದಿಸಲು ಅನುಮತಿಸಲಾಗಿದೆ (ಪ್ರತಿ ಲಗತ್ತಿಸಿದೆ).

ದಿನಾಂಕ 09-09-2020 ರಂದು ಶ್ರೀ ಎಸ್. ಸುರೇಶ್ ಕುಮಾರ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಸಭೆಯಲ್ಲಿ ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳ ವಿಷಯ 1 ಮತ್ತು 4 ರಲ್ಲಿ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷರಾದ ಶ್ರೀ ನಿಡಸಾಲೆ ಪುಟ್ಟಸ್ವಾಮಯ್ಯ ಇವರು ಲೇಖಕರು / ಪ್ರಕಾಶಕರ ವಾರ್ಷಿಕ ಪುಸ್ತಕ ಖರೀದಿ ಮಿತಿಯನ್ನು ರೂ. 1.00 ಲಕ್ಷದಿಂದ 3.00 ಲಕ್ಷಕ್ಕೆ ಹೆಚ್ಚಿಸುವಂತೆ ಮತ್ತು ವಾರ್ಷಿಕ ಸಗಟು ಖರೀದಿ ಯೋಜನೆಯಡಿ ಕನ್ನಡ ಪುಸ್ತಕಗಳ 300 ಪ್ರತಿಗಳಿಂದ 500 ಪ್ರತಿಗಳನ್ನು ಖರೀದಿಸುವಂತೆ ಆದೇಶ ಹೊರಡಿಸಲು ಮಾನ್ಯ ಇಲಾಖಾ ಸಚಿವರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).

ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿ ಮಾನ್ಯ ಸಚಿವರು ಪುಸ್ತಕ ಖರೀದಿ ಮಿತಿಯನ್ನು ರೂ. 1.00 ಲಕ್ಷದಿಂದ 3.00 ಲಕ್ಷಕ್ಕೆ ಹಾಗೂ ಕನ್ನಡ ಪುಸ್ತಕಗಳ ಸಗಟು ಖರೀದಿಯನ್ನು 300 ರಿಂದ 500 ಪ್ರತಿಗಳಿಗೆ ಹೆಚ್ಚಿಸಬೇಕೆಂಬುದು ಲೇಖಕರು, ಲೇಖಕ-ಪ್ರಕಾಶಕರ ಸಮುದಾಯದ ಬಹುದಿನಗಳ ಬೇಡಿಕೆಯಾಗಿದ್ದು, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ (ನಡವಳಿ ಪ್ರತಿಯನ್ನು ಲಗತ್ತಿಸಿದೆ).

ಅದರಂತೆ, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಕನ್ನಡ ಪುಸ್ತಕಗಳನ್ನು ಸರ್ಕಾರದ ಅನುಮೋದನೆ ಮತ್ತು ಅನುದಾನ ಪಡೆದ ನಂತರ ಯಾವುದೇ ಲೇಖಕರು, ಲೇಖಕ-ಪ್ರಕಾಶಕರು, ಪ್ರಕಾಶಕರು ಹಾಗೂ ಪ್ರಕಟಣಾ ಸಂಸ್ಥೆಗಳಿಂದ ಒಂದು ಆರ್ಥಿಕ ವರ್ಷದಲ್ಲಿ ರೂ. 3.00 ಲಕ್ಷ ಮಿತಿಗೊಳಪಟ್ಟು ಅಥವಾ 500 ಪ್ರತಿಗಳು ಇದರಲ್ಲಿ ಯಾವುದು ಮೊದಲೋ ಅದರಂತೆ ಖರೀದಿಸಲು ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಪ್ರಕರಣ-4 (ಜಿ) ಅಡಿಯಲ್ಲಿ ವಿನಾಯಿತಿ ನೀಡಿ (**ಕಾರಣ ಸರ್ಕಾರದ ಆದೇಶ ಸಂ. ಇಡಿ 234 ಎಲ್ಐಬಿ 2015, ಬೆಂಗಳೂರು ದಿಃ 22-12-2017 ರಲ್ಲಿ ಲೇಖಕ-ಪ್ರಕಾಶಕರು ತಾವು ಪ್ರಕಟಿಸಿದ ಪುಸ್ತಕಗಳಿಗೆ ಎಷ್ಟೇ ಬೆಲೆ ನಿಗದಿಪಡಿಸಿದ್ದರೂ ಸರ್ಕಾರದ ಆದೇಶದಂತೆ ಪ್ರತಿ ಪುಟಕ್ಕೆ ಬೆಲೆಯನ್ನು ಹೊಸದಾಗಿ ನಿಗದಿಪಡಿಸುವುದರಿಂದ, ಅನುಮತಿ ನೀಡಬಹುದಾಗಿರುತ್ತದೆ) (ಪ್ರತಿ ಲಗತ್ತಿಸಿದೆ)** ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆಯನ್ನು ಈ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ನಿರ್ದೇಶಕರು
ಸಾರ್ವಜನಿಕ ಗ್ರಂಥಾಲಯ ಇಲಾಖೆ
ಬೆಂಗಳೂರು

ಪ್ರತಿಯನ್ನು:

1) ಅಧ್ಯಕ್ಷರು, ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ (ರಿ), ನಂ.56/1-6, ನರಸಿಂಹಯ್ಯ ಗಾರ್ಡನ್, ಕೊಟ್ಟಿಗೆಪಾಳ್ಯ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು -91 ಇವರ ಮಾಹಿತಿಗಾಗಿ.
2) ಕಛೇರಿ ಪ್ರತಿ.

V. BOS/Purchase